ಆ) ಹಾಗಿದ್ದಲ್ಲಿ, ಇದುವರೆವಿಗೂ ಕೈಗೆತ್ತಿಕೊಳ್ಳದಿರಲು ಕಾರಣವೇನು?

ಇ) ಈ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಕೆ.ಹೆಚ್ ರಂಗನಾಥ್ (ಲೋಕೋಪಯೋಗಿ ಸಚಿವರು)

ಅ) ಕಂಗ್ರಾಳಿ ಕಡೋಲಿ ರಸ್ತೆಯ ಮಾರ್ಕಂಡೇಯ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣದ ಅವಶ್ಯಕತೆ ಗಮನಕ್ಕೆ ಬಂದಿದೆ.

ಆ) ಸರ್ವೆ ಕೆಲಸ ಮುಗಿದಿದ್ದು, ಅಂದಾಜು ಪಟ್ಟಿ ತಯಾರಿಯಲ್ಲಿದೆ.

ಇ) ಮುಂದಿನ ಹಣಕಾಸಿನ ವರ್ಷದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು.

ವಿಷಯ : ಸೋಮವಾರಪೇಟೆ ತಾಲ್ಲೂಕಿನಲ್ಲಿ ಮಿನಿ ವಿಧಾನ ಸೌಧದ ಕೆಲಸ ಕುಂಠಿತ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 397 (41)

ಶ್ರೀ ಎ.ಎಂ ಬೆಳ್ಳಿಯಪ್ಪ (ಸೋಮವಾರಪೇಟೆ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸೋಮವಾರಪೇಟೆ ತಾಲ್ಲೂಕಿನಲ್ಲಿ (ಸೋಮವಾರ ಪೇಟೆಯಲ್ಲಿ) ಒಂದು ಮಿನಿ ವಿಧಾನ ಸೌಧದ ಕಟ್ಟಡ ಕೆಲಸವು ಮಂದಗತಿಯಲ್ಲಿ ಸಾಗುತ್ತಿರಲು ಕಾರಣವೇನು?

ಆ) ಇಲ್ಲಿಯವರೆಗೆ ಈ ವಿಧಾನ ಸೌಧದ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ.

ಇ) ಈ ಕೆಲಸವನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು)

ಅ) ಸೋಮವಾರ ಪೇಟೆಯಲ್ಲಿ ನಿರ್ಮಾಣವಾಗುತ್ತಿರುವ ಮಿನಿ ವಿಧಾನ ಸೌಧ ಕಟ್ಟಡದ ಕೆಲಸ ಮಂದಗತಿಯಲ್ಲಿ ನಡೆಯುತ್ತಿಲ್ಲ. ಈಗಾಗಲೇ ನೆಲ ಅಂತಸ್ತಿಗೆ ಮೆಲ್ಛಾವಣೆ ಹಾಕಲಾಗಿದ್ದು ಮಳೆಗಾಲದಿಂದಾಗಿ ಕೆಲಸ ನಿಂತಿದ್ದು, ಮಳೆಗಾಲ ಕಳೆದೊಡನೆ ನಿಗದಿತ ಗುರಿಗಳನ್ನು ಸಾಧಿಸುವ ಯೋಜನೆ ಇದೆ.

ಆ) ಇಲ್ಲಿಯವರೆಗೆ ಒಟ್ಟು ರೂ. 21.30 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಈ ಕೆಲಸವನ್ನು ಗುತ್ತಿಗೆ ಕರಾರಿನಂತೆ 13-5-96 ರೊಳಗೆ ಪೂರ್ಣಗೊಳಿಸುವ ಯೋಜನೆಯಿದೆ.

ವಿಷಯ : ಬೆಳಗಾಂ ಜಿಲ್ಲೆಯ ನೀರಾವರಿ ಇಲಾಖೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 398(736)

ಶ್ರೀ ಶಿವಾನಂದ ಹೆಚ್.ಕೌಜಲಗಿ(ಬೈಲಹೊಂಗಲ) ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.